# ಕಾರಂತರ 'ಮರಳಿ ಮಣ್ಣಿಗೆ' ಕಾದಂಬರಿಯಲ್ಲಿ ದೇಶಿಯತೆಯ ಶೋಧನೆ

**ಡಾ. ಆರ್. ನಾಗಪ್ಪಗೌಡ**
ಸಹಪ್ರಾಧ್ಯಾಪಕರು, ಕನ್ನಡ ವಿಭಾಗ
ಮಂಗಳೂರು ವಿಶ್ವವಿದ್ಯಾನಿಲಯ
ಮಂಗಳಗಂಗೋತ್ರಿ–ಕೊಣಾಜೆ
ಮಂಗಳೂರು–574199.

ಕಡಲತಡಿಯ ಭಾರ್ಗವರೆಂದು ಪ್ರಖ್ಯಾತರಾಗಿರುವ ಡಾ. ಶಿವರಾಮ ಕಾರಂತರು ವಾಸ್ತವತವಾದದ ದೃಷ್ಟಿಕೋನದಿಂದ ಸಮಾಜವನ್ನು ಬದುಕನ್ನು ನೋಡಿ ತಾವು ಸಾರ್ವಕಾಲಿಕವೆಂದು ನಂಬುವ ಸಹಾನೂಭೂತಿ ಸ್ನೇಹ, ಜೀವನ ಶ್ರದ್ಧೆ, ಔದಾರ್ಯ, ಕಷ್ಟ ಸಹಿಷ್ಣುತೆ ಮೊದಲಾದ ಜೀವನ ಮೌಲ್ಯಗಳನ್ನು ನಿಕಷಕೊಡ್ಡುವ ಕಾರ್ಯವನ್ನು ತಮ್ಮ ಕಾದಂಬರಿಗಳಲ್ಲಿ ಯಶಸ್ವಿಯಾಗಿ ಮಾಡಿದ್ದಾರೆ. ಇಹದ ಬದುಕಿಗೆ ಕಾರಂತರಷ್ಟು ಮಹತ್ವ ನೀಡಿದ ಲೇಖಕರಿಲ್ಲ ಎನ್ನಬಹುದು. ಜೀವನ ಮೌಲ್ಯಗಳನ್ನು ಶೋಧಿಸಲು ಕಾದಂಬರಿ ಪ್ರಕಾರವನ್ನು ಒಂದು ಅರ್ಥಪೂರ್ಣವಾದ ಮಾಧ್ಯಮವನ್ನಾಗಿ ಕಾರಂತರು ಬಳಸಿಕೊಂಡಿದ್ದಾರೆ. ಬದುಕಿನ ಮೂಲಭೂತ ಸತ್ಯಾನ್ವೇಷಣೆಯಲ್ಲಿ ಇವರ ಕಾದಂಬರಿಗಳು ತೊಡಗುತ್ತವೆ.

ವಸಾಹತುಶಾಹಿಯ ಮೂಲಕ ಭಾರತೀಯ ಸಮಾಜವನ್ನು ಪ್ರವೇಶಿಸಿದ ಆಧುನಿಕತೆಯು ಸಾಂಪ್ರದಾಯಿಕ ಸಮಾಜದ ಸಂಬಂಧಗಳಲ್ಲಿ ಉಂಟುಮಾಡಿದ ತಲ್ಲಣ ಮತ್ತು ಪಲ್ಲಟಗಳನ್ನು ಕಾರಂತರು ಹಲವು ಕಾದಂಬರಿಗಳಲ್ಲಿ ಸೂಚಿಸಿಸುತ್ತಾರೆ. ಸಾಂಪ್ರದಾಯಿಕತೆ ಮತ್ತು ಆಧುನಿಕತೆಗಳೆರಲ್ಲೂ ಇರುವ ಕೇಡು, ಹಿಂಸೆ, ಅಮಾನವೀಯತೆಗಳನ್ನು ಕಾರಂತರು ಸ್ಪಷ್ಟವಾಗಿ ದಾಖಲಿಸಿದ್ದಾರೆ. ಅಂದರೆ ಪರಂಪರೆ ಮತ್ತು ಆಧುನಿಕತೆಗಳಲ್ಲಿರುವ ಒಳಿತಿನಿಂದ ವ್ಯಕ್ತಿ ವಿಕಾಸಕೊಳ್ಳಬೇಕೆಂಬುದು ಕಾರಂತರ ಪ್ರಮುಖ ಆಶಯವಾಗಿದೆ. ಹೀಗಾಗಿಯೇ ಇವರ ಕಾದಂಬರಿಗಳಲ್ಲಿ ಬರುವ ವಯಸ್ಸಾದ ಪಾತ್ರಗಳು ಸಾಂಪ್ರದಾಯಿಕ ಬದುಕನ್ನು ಕಿರಿಯ ಪಾತ್ರಗಳು ಆಧುನಿಕ ಬದುಕನ್ನು ಪ್ರತಿನಿಧಿಸುವುದನ್ನು ಕಾಣುತ್ತೇವೆ.

ಕಾರಂತರು ತಮ್ಮ "ಬಾಳ್ವೆಯೇ ಬೆಳಕು" ಕೃತಿಯಲ್ಲಿ ನಿಸರ್ಗವು ಮನುಷ್ಯನಿಗೆ ನೀಡುವ ಜ್ಞಾನದ ಬಗ್ಗೆ ಹೀಗೆ ಹೇಳಿದ್ದಾರೆ "ಕಣ್ಣಿಗೆ ಕಾಣಿಸದಂಥ ಬರೆಹ, ಕಿವಿಗೆ ಕೇಳಿಸದಂಥ ಮಾತು ನಿಸರ್ಗದ ನೋಟದಲ್ಲಿ ಅಡಕವಾಗಿದೆ. ವ್ಯಕ್ತಿಗೆ ನಿಸರ್ಗ ತಿಳಿಸುವಷ್ಟು ಸತ್ಯ–ಸೊಗಸು ಇನ್ನಾವುದರಿಂದಲೂ ದೊರೆಯಲಾರವು. ಅದುಕೊಡುವ ಪ್ರೇರಣೆ ಹೊಸ ಗಾಳಿಯಷ್ಟು ಹಸನು" ಎಂದಿದ್ದಾರೆ. ನಿಸರ್ಗವು ಮಾನವನ ವ್ಯಕ್ತಿತ್ವವನ್ನು ವಿಕಸನಗೊಳಿಸುವ ಶಕ್ತಿಯನ್ನು ಹೊಂದಿದೆ ಎಂದು ಕಾರಂತರು ಸ್ಪಷ್ಟಪಡಿಸುತ್ತಾರೆ. ಯಾವ ಮನುಷ್ಯ ಪ್ರಕೃತಿಯೊಂದಿಗೆ ಬೆರೆಯುತ್ತಾ, ಸ್ಪರ್ಧಿಸುತ್ತಾ, ಹೋಗುತ್ತಾನೋ ಅವನು ವಿಕಾಸಗೊಳ್ಳುತ್ತಾನೆ ಎಂಬುದು ಕಾರಂತರ ನಿಲುವಾಗಿದೆ. ಇದನ್ನು ಮರಳಿ ಮಣ್ಣಿಗೆ ಕಾದಂಬರಿಯಲ್ಲೂ ಗುರುತಿಸಬಹುದಾಗಿದೆ.

**ದೇಶೀಯತೆ:**

ವಸಾಹತುಶಾಹಿ ಆಡಳಿತದಂಥ ಮಹಾಶಕ್ತಿಯೊಂದು ದೇಶೀಯತೆಯ ಮೂಲ ನೆಲೆಗಳ ಮೇಲೆ ಆಕ್ರಮಣ ನಡೆಸಿದಾಗ ತನ್ನ ತನವೆಂಬ ದೇಶೀಯ ಪ್ರಜ್ಞೆ ಸಹಜವಾಗಿ ಜಾಗೃತವಾಗಿ ಅದೇ ದೇಶಿಯವಾದವಾಗಿ ಭಾರತದಲ್ಲಿ ಸ್ವಾತಂತ್ರ್ಯ ಆಂದೋಲನ ನಡೆದದ್ದನ್ನು ಗಮನಿಸಿದ್ದೇವೆ. ದೇಶೀಯತೆ ಎಂಬುದು ಒಂದು ಸಮಾಜದ ಜೀವಂತಿಕೆಯ ಸಂಕೇತ. ಯಾವುದೇ ವ್ಯಕ್ತಿ ತುಳಿತಕ್ಕೊಳಗಾದಾಗ ಆತ್ಮಾಭಿಮಾನ ಕೆರಳಿ ಜಾಗ್ರತವಾಗಿ ತನ್ನನ್ನು ಸಂರಕ್ಷಿಸಿಕೊಳ್ಳಲು ಹೋರಾಡುತ್ತಾನೆ. ಯಾವುದೇ ವ್ಯಕ್ತಿ, ಸಮುದಾಯ, ಸಂಸ್ಕೃತಿ, ಸಾಹಿತ್ಯ ತನ್ನದೇ ಆದ ನಾಡು–ನುಡಿಯಲ್ಲಿ ಮಾತ್ರ ಅಸ್ತಿತ್ವವನ್ನು ಕಂಡುಕೊಂಡು ಅನನ್ಯತೆಯನ್ನು ಗಳಿಸಲು ಸಾಧ್ಯವಾಗುತ್ತದೆ.

ಆಧುನಿಕ ಕನ್ನಡ ಕಾದಂಬರಿಗಳಲ್ಲಿ ದೇಶಿವಾದದ ನಿಲುವುಗಳು ಪರಂಪರೆ ಮತ್ತು ಆಧುನಿಕತೆಯ ಮುಖಾಮುಖಿಯಲ್ಲಿ, ಘರ್ಷಣೆಯಲ್ಲಿ, ಸಮನ್ವಯತೆಯಲ್ಲಿ ರೂಪಿತವಾಗುತ್ತಾ ಬಂದಿವೆ. ಕಾರಂತರ "ಮರಳಿ ಮಣ್ಣಿಗೆ" ಕಾದಂಬರಿಯಲ್ಲಿ ದೇಶಿಯತೆಯ ಶೋಧನೆಯ ವಿವಿಧ ಆಯಾಮಗಳನ್ನು ಗುರುತಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ

1942ರಲ್ಲಿ ಪ್ರಕಟವಾದ 'ಮರಳಿ ಮಣ್ಣಿಗೆ' ಕಾದಂಬರಿಯ ಮೊದಲ ಮಾತಿನಲ್ಲಿ ಕಾರಂತರು ಕೃತಿಯ ವಸ್ತುವಿನ ಬಗ್ಗೆ ಹೇಳುವ ಮಾತುಗಳು ಅವರು ಬದುಕಿಗೆ ಕೊಡುವ ಮಹತ್ವವನ್ನು ಸೂಚಿಸುತ್ತವೆ. "ಇದು ಒಂದೇ ತಲೆಮಾರಿನ ಕಥೆಯಲ್ಲ ಮೂರು ತಲೆಮಾರುಗಳ ಕಥೆ 1850ರ ಸುಮಾರಿಗೆ ತೊಡಗುವ ಈ ಕತೆಯು 1940ರಲ್ಲಿ ಮುಗಿಯುತ್ತದೆ. ನನ್ನ ಊರಿನ ಬಡತನದ ಬಾಳ್ವೆಯೇ ಕತೆಯ ವಸ್ತುವಾಗಿದೆ. ಈ ಬಾಳ್ವೆಯ ಪ್ರಶ್ನೆ ಈ ಮೂರು ತಲೆಮಾರುಗಳಲ್ಲಿ ಹೇಗೆ ಪ್ರತ್ಯುತ್ತರಗೊಳ್ಳುತ್ತದೆ ಎಂಬುದು ಇದರಲ್ಲಿ ಚಿತ್ರಿಸಲ್ಪಟ್ಟಿದೆ". ಅಂದರೆ ಈ 90 ವರ್ಷಗಳ ಕಾಲಾವಧಿಯಲ್ಲಿ ದಕ್ಷಿಣ ಕನ್ನಡದ ಕೋಡಿಯಂಥ ಕುಗ್ರಾಮದಲ್ಲಿಯ ಬ್ರಾಹ್ಮಣ ಕುಟುಂಬದ ಬದುಕಿನಲ್ಲಿ ಎದುರಾಗುವ ಸಮಸ್ಯೆಗಳಿಗೆ ಉತ್ತರಗಳನ್ನು ಕಂಡುಕೊಳ್ಳುವ ಪ್ರಕ್ರಿಯೆಯಲ್ಲಿ ಜರಗುವ ಪರಿವರ್ತನೆಗಳನ್ನು ಶೋಧಿಸುವುದು ಇದರ ಉದ್ದೇಶವಾಗಿದೆ. ಕಾರಂತರು ಇಹದ ಬದುಕಿಗೆ ಅದರ ವಾಸ್ತವತೆಯ ಗುಣಕ್ಕೆ ಪ್ರಧಾನ ಆದ್ಯತೆ ನೀಡುತ್ತಾರೆ ಹೀಗಾಗಿ ಅವರ ಕೃತಿಗಳಲ್ಲಿ ಜೀವನ ಶ್ರದ್ಧೆಯ ನಿರಂತರ ಶೋಧನೆ ಸೃಜನಾತ್ಮಕವಾಗಿ ನಡೆಯುತ್ತದೆ.

'ಮರಳಿ ಮಣ್ಣಿಗೆ' ಕಾದಂಬರಿಯ ಶೀರ್ಷಿಕೆಯೆ ದೇಶಿಯತೆಯನ್ನು ಸಂಕೇತಿಸುತ್ತದೆ, ಪ್ರಾದೇಶಿಕತೆಯನ್ನು ಸೂಚಿಸುತ್ತದೆ ಎನ್ನಬಹುದು. ಈ ಕೃತಿಯು ಮೂರು ತಲೆಮಾರುಗಳ ಜೀವನದ ಏಳು–ಬೀಳುಗಳನ್ನು, ಹೋರಾಟವನ್ನು, ವೈವಿಧ್ಯತೆಯನ್ನು

ಕೋಡಿಯಂಥ ಗ್ರಾಮದ ಜೀವನದಲ್ಲಿ ನಡೆದ ಸ್ಥಿತ್ಯಂತರಗಳನ್ನು ಇದಕ್ಕೆ ಕಾರಣವಾದ ಸಾಮಾಜಿಕ ಪ್ರಕ್ರಿಯೆಗಳನ್ನು ಬ್ರಾಹ್ಮಣ ಕುಟುಂಬವೊಂದನ್ನು ಕೇಂದ್ರವಾಗಿಟ್ಟುಕೊಂಡು ಚಿತ್ರಿಸಿದ್ದಾರೆ. ಈ ಸಂಪ್ರದಾಯ ಮತ್ತು ಆಧುನಿಕತೆಯ ಮುಖಾಮುಖಿಯ ಮೂಲಕ ಸಂಸ್ಕೃತಿಯ ಪಲ್ಲಟಗಳನ್ನು ವೈದಿಕ ಸಂಸ್ಕೃತಿಯ ವಿದಳನವನ್ನು ಈ ಕಾದಂಬರಿ ಅನಾವರಣಗೊಳಿಸುತ್ತದೆ.

ಕಾದಂಬರಿಯ ಕೊನೆಯಲ್ಲಿ ದೇಶಿ ಸಂಸ್ಕೃತಿಯ ಸತ್ವಶೀಲತೆ ಮತ್ತು ಆಧುನಿಕತೆಯ ಒಳಿತು ಇವೆರಡನ್ನು ಬೆಸೆದುಕೊಂಡ ಅರ್ಥವತ್ತಾದ ಬದುಕಿನ ಅನಿವಾರ್ಯತೆಯ ಸಾಧ್ಯತೆಯನ್ನು ಕಾರಂತರು ರಾಮನ ಪಾತ್ರದ ಮೂಲಕ ಸೂಚಿಸುತ್ತಾರೆ. ತನ್ನ ಬದುಕಿನ ಅಸ್ತಿತ್ವಕ್ಕಾಗಿ ಆಧುನಿಕ ಶಿಕ್ಷಣವನ್ನು (ಇಂಗ್ಲಿಷ್) ಪಡೆದ ರಾಮ ನಗರಗಳಲ್ಲಿ ಉದ್ಯೋಗವನ್ನು ಅರಸಿ ಅರಸಿ ಕೊನೆಗೆ ತನ್ನ ಊರಿಗೆ (ಮಣ್ಣಿಗೆ) ಪ್ರಕೃತಿಗೆ ಹಿಂದಿರುಗುವುದು ಇಡೀ ಕಾದಂಬರಿಯ ಆಶಯವನ್ನು ಧ್ವನಿಸುತ್ತದೆ. ಇಲ್ಲಿ ದೇಶಿ ಸಂಸ್ಕೃತಿಯ ನಿಲುವುಗಳನ್ನು ಗುರುತಿಸಬಹುದಾಗಿದೆ. ವಸಾಹತುಶಾಹಿ ಸಂಸ್ಕೃತಿಗೆ ಎದುರಾಗಿ ಇಲ್ಲಿ ದೇಶಿ ಸಂಸ್ಕೃತಿಯ ಸತ್ವಶೀಲತೆಯನ್ನು ಶೋಧಿಸುವ ಕಾಳಜಿಯನ್ನು ಕಾಣುತ್ತೇವೆ. ಇಂಗ್ಲಿಷ್ ಕಲಿಯುವುದರಿಂದ ಸರ್ವ ರೀತಿಯ ಆಧುನಿಕ ಸುಖಗಳು ದೊರಕಿಬಿಡುತ್ತವೆ ಎಂಬ ಭ್ರಮೆ ಏನಿತ್ತು ಅದನ್ನು ಇಲ್ಲಿ ಛಿದ್ರಗೊಳಿಸಲಾಗಿದೆ. ಇಲ್ಲಿಯ ಪರಿಸರ ಬರೀ ಪ್ರಕೃತಿಯ ಬಿಡಿ ಬಿಡಿ ವರ್ಣನೆಗಳಲ್ಲಿ ಮಾತ್ರ ಇರುವಂತದಲ್ಲ ಅದು ಪಾತ್ರಗಳಲ್ಲೆ ಅಂತಸ್ಥವಾಗಿದೆ ಇಲ್ಲಿಯ ಬದುಕಿಗೂ ನಿಸರ್ಗಕ್ಕೂ ನಿಕಟವಾದ ಸಂಬಂಧ ಇರುವುದು ವಿಶಿಷ್ಟವಾಗಿದೆ.

ಮರಳಿ ಮಣ್ಣಿಗೆ ಕಾದಂಬರಿಯ ಆರಂಭದಲ್ಲಿಯೇ ರಾಮ ಐತಾಳರು ಮತ್ತು ಪಾರೋತಿ ಇವರ ನಡುವೆ ನಡೆದ ಲಗ್ನದ ವರ್ಣನೆ ಹಾಗೂ ಕರಾವಳಿಯಲ್ಲಿ ಮಳೆಗಾಲದಲ್ಲಿ ಸುರಿಯುವ ಜಿರಾಪತಿ ಮಳೆಯ ವರ್ಣನೆಯನ್ನು ತುಂಬಾ ದೇಶೀಯವಾಗಿ ಕಾರಂತರು ಚಿತ್ರಿಸುತ್ತಾರೆ. ಇದನ್ನು ಮೊದಲ ಮೂರು ಪುಟಗಳಲ್ಲಿ ಕಾಣಬಹುದಾಗಿದೆ. ಜಡಿ ಮಳೆಯಿಂದಾಗಿ ಪಾರೋತಿಯ ಮದುವೆಯು ಅವ್ಯವಸ್ಥಿತವಾಗಿ ನಡೆದುದನ್ನು ಇಲ್ಲಿ ಸೂಚಿಸಲಾಗಿದೆ. ರಾಮ ಐತಾಳ ಮತ್ತು ಪಾರೋತಿಯ ತಮ್ಮ ವಿವಾಹದ ಸಂದರ್ಭದಲ್ಲಿ ಅನುಭವಿಸಿದ ಕಿರಿಕಿರಿ ಹಿಂಸೆ ಅವರ ನಂತರದ ಬದುಕಿನುದ್ದಕ್ಕೂ ಆವರಿಸಿಕೊಂಡಿದ್ದನ್ನು ಇಲ್ಲಿ ಗ್ರಹಿಸಲಾಗಿದೆ. ಪಾರೋತಿಯು ನಿಸರ್ಗದ ಒಂದು ಭಾಗವಾಗಿಯೇ ಚಿತ್ರಿತವಾಗಿರುವುದು ಗಮನಾರ್ಹವಾಗಿದೆ. ಪಾರೋತಿಯಲ್ಲಿ ಮಾನವ ಸಹಜವಾದ ನಿಸರ್ಗದ ಮೇಲಿನ ಪ್ರೇಮ ಇದೆಯಾದರೂ ಅದು ಸೌಂದರ್ಯ ಪ್ರಜ್ಞೆಯಾಗಿ ಅಭಿವ್ಯಕ್ತವಾಗುವುದಿಲ್ಲ. ಮೊದಲ ತಲೆಮಾರಿಗೆ ಸೇರಿದ ಇವಳಿಗೆ ಕಡಲು ಬದುಕಿನ ಅವಿಭಾಜ್ಯ ಅಂಗದಂತೆ ಬಾಸವಾದರೆ, ಎರಡನೇ ತಲೆಮಾರಿಗೆ ಸೇರಿದ ಲಚ್ಚನಿಗೆ (ಲಕ್ಷ್ಮಿನಾರಾಯಣ) ತನಗೆ ಬೇಸರವಾದಾಗ ಅದನ್ನು ಹೋಗಲಾಡಿಸಿಕೊಳ್ಳುವ ಸಾಧನವಾಗಿ ಮಾತ್ರ ಗೋಚರಿಸುತ್ತದೆ. ಲಚ್ಚ ತನ್ನ ಜೀವನದಲ್ಲಿ ಸಂಪೂರ್ಣ ಹಾದಿ ತಪ್ಪಲು ಕಾರಣ ಅವನು ತನ್ನ ಮನೆಯವರೊಂದಿಗಾಗಲೀ ಪ್ರಕೃತಿಯೊಂದಿಗಾಗಲೀ ಆರೋಗ್ಯಪೂರ್ಣವಾದ ಸಂಬಂಧವನ್ನು ಬೆಳೆಸಿಕೊಳ್ಳದಿದ್ದುದ್ದೇ ಆಗಿದೆ. ಅವನು ಪಡೆದ ಆಧುನಿಕ ಇಂಗ್ಲಿಷ್ ಶಿಕ್ಷಣವು ಅವನಿಗೆ ಸಂಬಂಧಿಕರೊಂದಿಗೆ ಹಾಗೂ ಪರಿಸರದೊಂದಿಗೆ ಬೆರೆಯುವುದನ್ನು ಕಲಿಸಲಿಲ್ಲ ಎಂಬ ಧ್ವನಿಯು ವ್ಯಕ್ತವಾಗುತ್ತದೆ.

ಮೂರನೇ ತಲೆಮಾರಿಗೆ ಸೇರಿದ ರಾಮ ಚಿಕ್ಕಂದಿನಿಂದಲೂ ತನ್ನ ಪರಿಸರದೊಂದಿಗೆ, ಸಮುದ್ರದೊಂದಿಗೆ, ತನ್ನ ತಾಯಿಯೊಂದಿಗೆ, ಗಾಢವಾದ ಸಜೀವವಾದ ಸಂಬಂಧವನ್ನು ರೂಡಿಸಿಕೊಳ್ಳುತ್ತಾ ಹೋಗುವುದನ್ನು ಕಾದಂಬರಿಯು ಧ್ವನಿವತ್ತಾಗಿ ಚಿತ್ರಿಸುತ್ತದೆ. ರಾಮನಿಗೆ ತನ್ನ ತಾಯಿ ಹಾಗೂ ಸಮುದ್ರದ ಬಗ್ಗೆ ಇದ್ದ ನಿಷ್ಕಲ್ಮಶವಾದ ಸಹಜ ಪ್ರೀತಿಯೇ ಅವನನ್ನು ಜೀವನದುದ್ದಕ್ಕೂ ಕ್ರಿಯಾಶೀಲನಾಗಿ ಒಳ್ಳೆಯ ವ್ಯಕ್ತಿತ್ವ ಮತ್ತು ಬಾಳನ್ನು ರೂಪಿಸಿಕೊಳ್ಳಲು ಸ್ಫೂರ್ತಿಯಾಯಿತೆನ್ನಬಹುದು. ನಾಗವೇಣಿ ದೊಡ್ಡತ್ತೆ, ಸಣ್ಣತ್ತೆಯರನ್ನು ಕಳೆದುಕೊಂಡ ಮೇಲೆ ಕೋಡಿಯ ತನ್ನ ಮನೆಯಲ್ಲಿ ಚಿಕ್ಕ ಹುಡುಗ ರಾಮನೊಡನೆ ಹೇಗೆ ಜೀವನ ಸಾಗಿಸುವುದು ಎಂಬ ಗಾಢ ಚಿಂತೆಯಲ್ಲಿ ಮುಳುಗುತ್ತಾಳೆ. ಸರಿಯಾದ ನಿರ್ಧಾರಕ್ಕೆ ಬರಲು ಸಾಧ್ಯವಾಗುವುದಿಲ್ಲ, ಅವಳ ಮನಸ್ಸು ಹೊಯ್ದಾಟಕ್ಕೊಳಗಾಗುತ್ತದೆ. ಸುಮ್ಮನೆ ಆಕಾಶದ ಮೋಡಗಳನ್ನು ದಿಟ್ಟಿಸುತ್ತಾ ಕುಳಿತಿದ್ದಾಗ, ಅವಳ ಮಗ ರಾಮ "ಅಮ್ಮ ಸಮುದ್ರಕ್ಕೆ ಹೋಗುವ ಎನ್ನುತ್ತಾನೆ, ಮಗು ಮುಸ್ಸಂಜೆಯಾಯ್ತಲ್ಲ; ನಾಳೆ ಹೋದರಾಗದೇ? ಎಂದಳು ಇಲ್ಲ ಈಗಲೇ ಹೋಗುವ; ನನಗೆ ಇಲ್ಲಿ ಬೇಸರವಾಗುತ್ತದೆ ನೀನೂ ನನ್ನ ಹತ್ತಿರ ಮಾತನಾಡುವುದಿಲ್ಲ ಎಂದನು. ಸಮುದ್ರದಲ್ಲಿ ಯಾರು ನಿನ್ನ ಹತ್ತಿರ ಮಾತನಾಡುವವರು?

'ಸಮುದ್ರ'

ಅದು ಮಾತನಾಡುತ್ತದೆಯೋ ಅಣ್ಣ ನಿನ್ನ ಹತ್ತಿರ? ಹೌದು ಅದಕ್ಕೂ ನನಗೂ ಪ್ರೀತಿ, ನನ್ನ ಹತ್ತಿರ ಅದಕ್ಕೆ ತುಂಬಾ ಕೊಂಡಾಟ ಬಾ ಅಮ್ಮ ಹೋಗುವ ಎಂದು ಹಟ ಮಾಡಿದನು. ಮಗುವಿನ ಬೇಸರ ಹೋದರೆ ಸಾಕೆಂದು, ತನ್ನ ಬೇಸರದ ಹೊರೆಯನ್ನು ಹೊರುತ್ತ ಕಡಲಿನ ಕಡೆಗೆ ಸಾಗಿದಳು ಆಗಾಗಲೇ ಬಾನು ಕೆಂಪಡರಿತ್ತು". (ಪು: 169–70) ಎಂದು ಕಾದಂಬರಿಯಲ್ಲಿ ತಾಯಿ ಮಗನ ಸಂಭಾಷಣೆಯನ್ನು ಕಟ್ಟಿಕೊಡಲಾಗಿದೆ. ಇಲ್ಲಿ ನಾವು ಗಮನಿಸಬೇಕಾಗಿರುವುದು ರಾಮನಲ್ಲಿ ಚಿಕ್ಕಂದಿನಲ್ಲೆ ಸಮುದ್ರ ಮತ್ತು ತಾಯಿಯ ಬಗ್ಗೆ ಇದ್ದ ಪರಿಶುದ್ಧವಾದ ಪ್ರೀತಿ. ಈ ಕಾರಣದಿಂದಲೇ ಅವನ ಬೇಸರವು ಕಡಲ ಬಳಿಗೆ ಹೋದಾಗ ಮಾಯವಾಗುತ್ತದೆ. ನಾಗವೇಣಿಯು ಮಗನ ಸಮುದ್ರದೊಂದಿಗಿನ ಕ್ರಿಯಾತ್ಮಕವಾದ ಸ್ಪಂದನವನ್ನು ನೋಡಿ ತನ್ನ ನೋವನ್ನು ಮರೆಯುತ್ತಾಳೆ. ಪ್ರಕೃತಿಯ ಆಗು–ಹೋಗುಗಳಿಗೆ ಯಾವ ಮನುಷ್ಯನು ಸರಿಯಾಗಿ ಸ್ಪಂದಿಸುತ್ತಾನೋ ಅವನಿಗೆ ಅದರಿಂದ ಆನಂದವುಂಟಾಗುತ್ತದೆ ಎಂಬುದು ಇದರಿಂದ ತಿಳಿಯುತ್ತದೆ. ರಾಮನಲ್ಲಿದ್ದ ಕಡಲಿನ ಈ ಪ್ರೀತಿಯೇ ಅವನನ್ನು ಜೀವನದುದ್ದಕ್ಕೂ ಕ್ರಿಯಾಶೀಲನಾಗಿ ಅರ್ಥಪೂರ್ಣವಾದ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ಪ್ರೇರಣೆಯಾಗುತ್ತದೆ. ವಿದ್ಯಾಭ್ಯಾಸದ ನಂತರ ಉದ್ಯೋಗಕ್ಕೆ ಅವನು ಮಂಗಳೂರು, ಮದ್ರಾಸ್, ಬೆಂಗಳೂರು, ಮೈಸೂರು, ಬಾಂಬೆ ಮೊದಲಾದ ನಗರಗಳಲ್ಲಿ ಅಲೆದಾಡಿದರೂ ಎಷ್ಟೇ ಸವಾಲುಗಳು ಎದುರಾದರೂ ತನ್ನ ವ್ಯಕ್ತಿತ್ವವನ್ನು ಕಳೆದುಕೊಳ್ಳದೆ ಮರಳಿ ತನ್ನ ಊರಿಗೆ ಬಂದು ತಾಯಿಯೊಂದಿಗೆ ಆದರ್ಶವಾದ ಹೊಸ ಬದುಕನ್ನು ರೂಪಿಸಿಕೊಳ್ಳುತ್ತಾನೆ. ವಂಶಪಾರಂಪರ್ಯ ವೃತ್ತಿಯಾದ ಪೌರೋಹಿತ್ಯವನ್ನು ತ್ಯಜಿಸಿ ಕೃಷಿ ಮತ್ತು ಶಿಕ್ಷಕ ವೃತ್ತಿಯನ್ನು ಆಯ್ಕೆ ಮಾಡಿಕೊಳ್ಳುವುದು ತುಂಬಾ ಅರ್ಥವತ್ತಾಗಿದೆ. ರಾಮನು ಮರಳಿ ಮಣ್ಣಿಗೆ ಬಂದ ನಂತರವು ಸಮುದ್ರದ ಒಡನಾಟದಿಂದಲೇ ತನ್ನ ಸೃಜನಶೀಲತೆಯನ್ನು ಬೆಳೆಸಿಕೊಳ್ಳುತ್ತಾನೆ. ಇದನ್ನು ಕಾದಂಬರಿಯ ಈ ಸಾಲುಗಳಲ್ಲಿ ಕಾಣಬಹುದು. "ಎದುರಿಗೆ ಪಡುಗಡಲು ತನ್ನ ಆವೇಶಕ್ಕೆ ತಾನೇ ನಕ್ಕು

ಉರುಳುವಂತೆ ಕಾಣುತ್ತಿತ್ತು. ರಾಮ ಈಚಿಂದ ಈಚೆಗೆ, ನಿಸರ್ಗದ ಶಾಂತಿಯಿಂದ ರೌದ್ರಕ್ಕೆ ಕಣ್ಣು ತಿರುಗಿಸಿ ನೋಡುತ್ತಲೇ ಇದ್ದನು. ಆ ರಾತ್ರಿಯಲ್ಲಿ ಅವನು ಮೂಕನಾಗಿದ್ದನು. ಅವನ ಕಣ್ಣುಗಳ ಮುಂದೆ ಅಂದಿನ ಸಂಜೆಯ ಕಡಲು, ನಿಂತ ನೀರುಗಳೇ ಕುಣಿದಾಡುತ್ತಿದ್ದವು. ಮರುದಿನ ಬೆಳಿಗ್ಗೆ ಅವನು ಮನೆಯ ಚಾವಡಿಯಲ್ಲಿ ಕಾಗದವನ್ನು ಬಿಡಿಸಿ ತನ್ನ ಹಿಂದಣ ಸಂಜೆಯ ಕನಸನ್ನು ಬರೆಯುತ್ತಿದ್ದನು. ದೆವ್ವದಂತಹ ನಾಲ್ಕು ಹನೆಮರಗಳು ನೆಲದಿಂದ ಬಾನನ್ನು ಸೀಳಿದ್ದವು. ಎದುರಿಗೆ ಕಾಲಬುಡದಲ್ಲಿ ನಗುವ ಮೋಡಗಳನ್ನು ಬಿಂಬಿಸುತ್ತಿದ್ದ ವಿಶಾಲವಾದ ಹಾಳೆಯೊಂದಿತ್ತು. ಅದರಿಂದಾಚೆಗೆ ಕಡಲ ದಿನ್ನೆ ಮುಂದೆ ರೌದ್ರವಾಗಿ ಹುಚ್ಚೆದ್ದು ನಗುತ್ತಿರುವ ಅಲೆಗಳು, ಅದರ ತೀರ ತೀರ ಹಿಂಗಡೆಯಲ್ಲಿ ಬಾನನ್ನು ಹೊಂಬೆಳಕಿಗೆ ಆಗರವನ್ನಾಗಿ ಮಾಡಿದ ಸೂರ್ಯನ ಲೀಲೆ, ಊಟಕ್ಕೆ ತಾಯಿ ಕರೆಯುವ ತನಕವೂ ಅವನ ಕುಚ್ಚಿನ ಆಟ ಸಾಗಿತ್ತು. ನಾಗವೇಣಿಯು ಮಗನ ಕೈವಾಡವನ್ನು ನೋಡಿ ಮರುಳಾಗಿ ನಿಂತಿದ್ದಳು" (ಪು:408–9) ಹೀಗೆ ಕಡಲು ತನ್ನಲ್ಲುಂಟು ಮಾಡಿದ ಅನುಭವಗಳನ್ನು ಅದರ ಚೆಲುವನ್ನು ರಾಮ ಚಿತ್ರದ ಮೂಲಕ ಸೆರೆ ಹಿಡಿಯುವ ಚಿತ್ರಕಾರನಾಗಿ ಬೆಳೆದಿದ್ದನು.

ರಾಮನಿಗೆ ತನ್ನ ಊರಿನ ಸಮುದ್ರ ಆಕರ್ಷಿಸಿದ ಹಾಗೆ ಇನ್ಯಾವುದೂ ಆಕರ್ಷಿಸಲಿಲ್ಲ ಎಂಬುದು ಕಾದಂಬರಿಯಲ್ಲಿ ಸೂಚಿತವಾಗಿದೆ. ಮದ್ರಾಸಿನಲ್ಲಿ ಚಿಕ್ಕಮ್ಮನ ಮನೆಯಲ್ಲಿದ್ದು ವಿದ್ಯಾಭ್ಯಾಸ ಮಾಡುತ್ತಿದ್ದಾಗ ಅಲ್ಲಿಯ ಸಮುದ್ರಕ್ಕೆ ಮಕ್ಕಳೊಂದಿಗೆ ಹೋಗುತ್ತಿದ್ದ. ಆಗ ಮನಸ್ಸಿಗೆ ಹೀಗೆ ಅನಿಸುತ್ತಿತ್ತು "ಅದು ಕಡಲತೀರ ಕೋಡಿಯ ಕಡಲಿನ ಭವ್ಯತೆ ಅದಕ್ಕೆ ಬರಲಾರದು, ಅದರ ಅನಂತತೆಯು ಕಾಣಲಾರದು, ಅದರ ಶಾಂತಿಯು ಸಿಗಲಾರದು." (ಪು:317) ಮದ್ರಾಸ್ ನಿಂದ ಕೋಡಿಗೆ ಬಂದಾಗ ಕಡಲನ್ನು ನೋಡಿ ಹುಚ್ಚಾಗಿ ಜೋರಾಗಿ ಕಿರುಚಿ ಕೊಂಡಾಗ ತಾಯಿ ನಿನಗೇನು ಮರುಳೇ ಅಲ್ಲಿನ ಸಮುದ್ರಕ್ಕೆ ದಿನ ಹೋಗುತ್ತೀ ಎನ್ನುತ್ತೀ! ಎಂದು ಪ್ರಶ್ನಿಸಿದಾಗ ರಾಮನು ಹೀಗೆ ನುಡಿಯುತ್ತಾನೆ "ನಿತ್ಯ ಹೋದರೆ ನಮ್ಮ ಕಡಲಿಗೆ ಅದು ಸಮನೇ: ಇಲ್ಲಿ ಹೀಗೆ ಮರುಳಾಗಿ ಬೊಬ್ಬೆ ಹಾಕಿದೆನೆಂದು ಅಲ್ಲಿ ಬಾಯಿ ತೆರೆದರೆ ಹುಚ್ಚರ ಆಸ್ಪತ್ರೆಗೆ ಒಯ್ದಾರು ಈ ಶಾಂತಿ ಅಲ್ಲಿ ಬಂದಿತೇ ಅಮ್ಮ ನಮ್ಮ ನಮ್ಮದು ಯಾವಾಗಲೂ ಚೆಂದವೇ." (ಪು:320)

ಬಾಂಬೆಯಲ್ಲಿ ಕಲಾವಿದೆ ನೋವಾಳಲ್ಲಿ ಚಿತ್ರಕಲೆಯನ್ನು ಕಲಿಯುವಾಗ ಕೋಡಿಯಿಂದ ತನ್ನ ತಾಯಿ ರಾಮನಿಗೆ ಉದ್ಯೋಗ ಹುಡುಕುವುದು ಬೇಡ ಊರಲ್ಲಿ ಕೃಷಿ ಕೆಲಸ ಮಾಡಿ ಬದುಕನ್ನು ಸಾಗಿಸುವ ನೀನು ಆದಷ್ಟು ಬೇಗನೆ ಹಿಂದಿರುಗಿ ಬಾ ಎಂದು ಪತ್ರ ಬರೆದಿದ್ದಳು. ಊರಿಗೆ ಹೊರಡುವ ಮುಂಚೆ ರಾಮನು ನೋವಾಳೊಂದಿಗೆ ನಿಮಗೆ ಕಡಲಲ್ಲಿ ಹುಚ್ಚಿಲ್ಲವೇ ನೀವು ಅದರ ಚಿತ್ರ ಬರೆಯುವುದನ್ನು ಕಾಣಲಿಲ್ಲವಲ್ಲ? ಎಂದು ಕೇಳುತ್ತಾನೆ. ಜೊತೆಗೆ ತನ್ನ ಕಡಲಿನ ಬಗ್ಗೆ ಹೀಗೆ ಹೇಳುತ್ತಾನೆ "ಇಲ್ಲಿನ ಕಡಲು ನನ್ನೂರಿನ ಕಡಲಲ್ಲ! ನನಗೆ ಚಿಕ್ಕಂದಿನಿಂದ ಅದೇ ಜೋಗುಳದ ಹಾಡಾಗಿತ್ತು. ಅದರ ರಾಗವೆಲ್ಲ ನಮ್ಮ ಮನೆಯಿಂದ ಕೇಳಿಸುತ್ತದೆ. ಇಲ್ಲಿನ ಶಾಂತ ಕಡಲನ್ನು ಕಂಡು ಏನನ್ನೋ ಕಳೆದುಕೊಂಡ ಕಡಲಿನಂತೆ ಕಾಣಿಸುತ್ತದೆ ಈ ಕಡಲಿಗೆ ನಮ್ಮ ಕಡಲಿನಂತೆ ಆತ್ಮವಿಲ್ಲ ಎಂದು ಕಾಣುತ್ತದೆ." (ಪು:394)

ಹೀಗೆ ಮರಳಿ ಮಣ್ಣಿಗೆ ಕಾದಂಬರಿಯ ಉದ್ದಕ್ಕೂ ಕಡಲು ಒಂದು ಸಜೀವ ಪಾತ್ರದಂತೆ ಚಿತ್ರಿತವಾಗಿದೆ. ಮೂರು ತಲೆಮಾರಿನ ಪಾತ್ರಗಳಿಗೆ ಕಡಲು ಭಿನ್ನ ಭಿನ್ನವಾಗಿ ಗೋಚರಿಸುವುದನ್ನು ಕಾಣುತ್ತೇವೆ. ರಾಮನ ವ್ಯಕ್ತಿತ್ವ ನಿರ್ಮಾಣದಲ್ಲಿ ತಾಯಿ ನಾಗವೇಣಿಯಂತೆಯೇ ಕೋಡಿಯ ಸಮುದ್ರವು ಪ್ರಮುಖ ಪಾತ್ರವಹಿಸಿರುವುದು ಮಹತ್ವಪೂರ್ಣವಾಗಿದೆ.

ಪುರುಷ ಪ್ರಧಾನ ಕೌಟುಂಬಿಕ ವ್ಯವಸ್ಥೆಯಲ್ಲಿ ಅದರ ಮೌಲ್ಯಗಳನ್ನು ಒಪ್ಪಿಕೊಂಡು ಜೀವಿಸುವ ಸ್ತ್ರೀಯರಿಗೆ ಬದುಕು ಯಾವಾಗಲೂ ಆಶಾದಾಯಕವಲ್ಲ. ಪುರುಷನ ಸ್ವಾರ್ಥ ಬಯಕೆಗಳ ಮೂಲದಿಂದ ನಿಷ್ಪನ್ನವಾಗುವ ಸಮಸ್ಯೆಗಳು ಕುಟುಂಬದ ಸ್ತ್ರೀಯರನ್ನು ನೇರವಾಗಿ ತಟ್ಟುತ್ತವೆ. ಸಮಸ್ಯೆಗಳ ಸೃಷ್ಟಿಗೆ ಕಾರಣನಾದ ಪುರುಷ ಒಳಮಾರ್ಗಗಳಿಂದ ಪಲಾಯನಗೊಳ್ಳುತ್ತಾನೆ. ಭಾರತೀಯ ಸಂಪ್ರದಾಯನಿಷ್ಠ ಕುಟುಂಬ ವ್ಯವಸ್ಥೆಯಲ್ಲಿ ಸ್ತ್ರೀಯರು ಬದುಕಿಗಾಗಿ ಹರಸಾಹಸ ಮಾಡಬೇಕಾಗುತ್ತದೆ. ಈ ನೆಲೆಯಲ್ಲಿ ಕಾರಂತರ "ಮರಳಿ ಮಣ್ಣಿಗೆ" ಕಾದಂಬರಿಯಲ್ಲಿ ಚಿತ್ರಿತವಾಗಿರುವ ಕೌಟುಂಬಿಕ ಮಾದರಿಗಳನ್ನು ಅರ್ಥಮಾಡಿಕೊಳ್ಳಬೇಕಾಗುತ್ತದೆ. ರಾಮೈತಾಳರ ಕುಟುಂಬದಲ್ಲಿ ಬರುವ ಪಾರೋತಿ, ಸರಸೋತಿ, ಸತ್ಯಭಾಮೆ, ನಾಗವೇಣಿ ಮೊದಲಾದ ಸ್ತ್ರೀಯರು ಯಾರೂ ಸುಖ ಜೀವನವನ್ನು ಅನುಭವಿಸುವ ಅವಕಾಶಗಳನ್ನು ಪಡೆಯುವುದಿಲ್ಲ. ಕೌಟುಂಬಿಕವಾಗಿ ಸಮಸ್ಯೆಗಳ ಸುಳಿಯಲ್ಲಿ ಒದ್ದಾಡುವುದನ್ನು ಕಾಣುತ್ತೇವೆ. ಈ ಕೃತಿಯ ಕಥೆಯ ಬಗ್ಗೆ ಡಾ.ಎನ್.ಕೆ. ಕೋದಂಡರಾಮರವರು ಹೇಳುವ ಮಾತು ಸರಿಯಾಗಿದೆ "ಈ ಕಥೆಯ ಮೂರು ತಲೆಮಾರುಗಳ ಆಶಯಗಳಾದ ಸ್ಥಿರತೆ, ಗೊಂದಲ ಮತ್ತು ಸ್ಥಿತ್ಯಂತರಗಳ ನೆಲೆಗಳನ್ನು ಆ ಕಾಲಮಾನದ ಪರಿಸರದಲ್ಲಿ ಅಧ್ಯಯನ ಮಾಡುವುದಾಗಿದೆ" (ಕನ್ನಡ ಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷ, 1996, ಪು:44) ರಾಮೈತಾಳರು ಇವರ ಹೆಂಡತಿಯರಾದ ಪಾರೋತಿ, ಸತ್ಯಭಾಮೆ, ತಂಗಿ ಸರಸೋತಿ ಇವರು ಮೊದಲ ತಲೆಮಾರಿಗೆ ಸೇರಿದವರು. ಈ ಕುಟುಂಬದಲ್ಲಿ ಬಡತನವಿದ್ದರೂ ಆರ್ಥಿಕ ಸಂಕಷ್ಟಗಳು ಇದ್ದರೂ ಕುಟುಂಬದ ಸದಸ್ಯರಲ್ಲಿ ಸಂಘರ್ಷಗಳಿಲ್ಲದ ಕಾರಣದಿಂದ ಇಲ್ಲಿ ಸ್ಥಿರತೆ ಕಂಡು ಬರುತ್ತದೆ. ಸಂಪ್ರದಾಯನಿಷ್ಠ ಕೌಟುಂಬಿಕ ಬದುಕು ಇಲ್ಲಿ ಚಿತ್ರಿತವಾಗಿದೆ. ಕುಟುಂಬದಲ್ಲಿ ಭೇದ–ಭಾವವಿದ್ದರೂ ಪರಂಪರಾಗತವಾಗಿ ಬಂದಿರುವ ಪುರುಷ ಪ್ರಧಾನ ಮೌಲ್ಯಗಳನ್ನು ಒಪ್ಪುವುದರಿಂದ ಹೊಂದಾಣಿಕೆ ಸಾಧ್ಯವಾಗುತ್ತದೆ. ಪ್ರಮುಖ ನಿರ್ಧಾರದ ಸಂದರ್ಭದಲ್ಲಿ ಯಜಮಾನ ಸ್ತ್ರೀಯರನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ ರಾಮೈತಾಳರು ತನ್ನ ಎರಡನೇ ಮದುವೆಯ ಬಗ್ಗೆ ತನ್ನ ಹೆಂಡತಿ ಪಾರೋತಿನ್ನಾಗಲೀ ತನ್ನ ತಂಗಿ ಸರಸೋತಿಯನ್ನಾಗಲಿ ಒಂದು ಮಾತು ಕೇಳುವುದಿಲ್ಲ, ತಾನೊಬ್ಬನೆ ನಿರ್ಧರಿಸುತ್ತಾನೆ. ಇದನ್ನು ತಿಳಿದ ಸರಸೋತಿ ಮಾವನ ಮನೆಗೆ ಕೋಪದಿಂದ ಹೊರಟು ಹೋಗುತ್ತಾಳೆ. ಅಣ್ಣ ಅವಳ ಮನೆಗೆ ಹೋಗಿ ಸಮಾಧಾನ ಮಾಡಿದಾಗ ಅವನ ಜೊತೆಯಲ್ಲಿಯೇ ಹಿಂದಿರುಗುತ್ತಾಳೆ. ರಾಮೈತಾಳರು ತಾನೆ ಮನೆಯ ಯಜಮಾನನಾಗಿರುವುದರಿಂದ ತನ್ನ ನಿರ್ಧಾರವನ್ನು ವಿರೋಧಿಸಲಾರರೆಂಬ ಅಧಿಕಾರ ದರ್ಪದಿಂದಲೇ ವರ್ತಿಸುವುದನ್ನು ಕಾರಂತರು ಹೀಗೆ ಸೂಚಿಸುತ್ತಾರೆ. ಶೀನನು ನಿಮ್ಮ ಎರಡನೇ ಮದುವೆಗೆ ಪಾರೋತಿ ಒಪ್ಪಿದ್ದು ಹೇಗೆ ಎಂದು ಪ್ರಶ್ನಿಸಿದಾಗ ಐತಾಳರು ಕೊಡುವ ಉತ್ತರದಲ್ಲಿ ಈ ಸೂಚನೆಯಿದೆ. "ಶೀನ ನಮ್ಮ ಮನೆಯ ಪಂಚಾತಿಕೆ ನಿನಗೆ ಗೊತ್ತಿಲ್ಲ. ನಮ್ಮಲ್ಲಿ ಒಬ್ಬ ಯಜಮಾನ ಎಂದರೆ ಒಬ್ಬನೇ ಯಜಮಾನ. ಗಂಡನು ಒಂದು ಹೇಳುವುದು ಹೆಂಡತಿ ಇನ್ನೊಂದನ್ನು ಅನ್ನುವುದೇ ಈವರೆಗೆ ನಡೆದಿಲ್ಲ." (ಪು:58) ಈ ಮಾತುಗಳು ಕುಟುಂಬದಲ್ಲಿ ಯಜಮಾನನಿಗಿರುವ ಪರಮಾಧಿಕಾರವನ್ನು

ಸೂಚಿಸುತ್ತವೆ. ಐತಾಳರ ಮದುವೆಯ ಅವಶ್ಯಕತೆ ಹಾಗೂ ಅಧಿಕಾರವನ್ನು ಪಾರೋತಿ, ಸರಸೋತಿಯರು ವಿರೋಧಿಸದೆ ಅಸಹಾಯಕರಾಗಿ ಒಪ್ಪಿಕೊಳ್ಳುತ್ತಾರೆ. ಎರಡನೆ ಮದುವೆ ಬಗ್ಗೆ ಐತಾಳರು ಕೊಡುವ ಕಾರಣ ಹೀಗಿದೆ "ಅವಳು ನನಗೆ ಬೇಡವಾಗಿ ಇನ್ನೊಂದು ಮದುವೆ ನಿಶ್ಚಯ ಮಾಡಿದ್ದಂತೇನು? ಏನೋ ದೇವರು ಒಂದು ಗಂಡು ಸಂತಾನ ಕೊಟ್ಟರೆ ಸತ್ತ ಮೇಲೆ ಅವಳಿಗೂ ಒಂದು ಪಿಂಡ ನನಗೂ ಒಂದು ಪಿಂಡ ಬಿದ್ದೀತು ಎಂದು ಆಸೆ ಮೂಡಿದರೆ" (ಪು:66) ಎಂದು ಹೇಳಿ ಅವರ ಸಮ್ಮತಿ ದೊರಕಿಸಿ ಕೊಳ್ಳುತ್ತಾರೆ. ಮೊದಲ ಪತ್ನಿಯಲ್ಲಿ ಗಂಡು ಸಂತಾನ ಪ್ರಾಪ್ತವಾಗದಿದ್ದಾಗ ಎರಡನೇ ಮದುವೆಯಾಗುವ ಹಕ್ಕನ್ನು ಪುರುಷ ಪ್ರಧಾನ ಸಾಂಪ್ರದಾಯಿಕ ಸಮಾಜ ಗಂಡಿಗೆ ನೀಡಿದೆ. ಇದರಿಂದಾಗಿಯೇ ರಾಮೈತಾಳರು ಮನೆಯ ಒಳಗೆ ಮತ್ತು ಹೊರಗೆ ವಿಶೇಷಾಧಿಕಾರದಿಂದ ವ್ಯವಹರಿಸುತ್ತಾರೆ. ಆ ಕುಟುಂಬದ ಮೂಲ ಆದಾಯ ಕೃಷಿ ಮತ್ತು ಪೌರೋಹಿತ್ಯದಿಂದ ಬರುತ್ತದೆ. ಕೃಷಿ ಕೆಲಸ ಹಾಗೂ ಮನೆಯೊಳಗಿನ ಪೂರ್ಣ ಹೊಣೆಗಾರಿಕೆಯನ್ನು ಹೆಂಗಸರಿಗೆ ವಹಿಸಿ ಐತಾಳರು ಪೌರೋಹಿತ್ಯದಲ್ಲಿ ಅಲೆದಾಡುತ್ತಾರೆ. ಸಾಗುವಳಿಯಿಂದ ಬಂದ ಆದಾಯವನ್ನು ವ್ಯವಹಾರದ ಹೆಸರಿನಲ್ಲಿ ಕಸಿದುಕೊಳ್ಳುತ್ತಾರೆ. ಆ ಮೂಲಕ ಹೆಂಗಸರು ನನ್ನ ದಾಸ್ಯದಲ್ಲಿರುವಂತೆ ನೋಡಿಕೊಳ್ಳುತ್ತಾರೆ. ಹೀಗೆ ಆ ಕುಟುಂಬದಲ್ಲಿ ಪರಸ್ಪರ ಪ್ರೀತಿ ವಿಶ್ವಾಸದ ಆರೋಗ್ಯವಂತ ಪರಿಸರ ಕಂಡುಬರುವುದಿಲ್ಲ ಕುಟುಂಬದ ಯಜಮಾನ ಮಾನವೀಯವಾಗಿ ವರ್ತಿಸದೆ ತಮ್ಮ ವೈಯಕ್ತಿಕ ಹಿತಾಹಿತಗಳ ನೆಲೆಯಲ್ಲಿ ಜೀವನದ ಬಹುಮುಖ್ಯ ಸಂದರ್ಭಗಳಿಗೆ ಪ್ರತಿಕ್ರಿಯಿಸುತ್ತಾನೆ.

ಸರಸೋತಿ ಅಣ್ಣನ ಬಗ್ಗೆ (ಐತಾಳ) ಸಿಟ್ಟಾಗಿ ಮಾವನ ಮನೆಗೆ ಹೊರಟು ನಿಂತಾಗ ಪಾರೋತಿಯ ತುಟಿ ನಡುಗಿತು, ಎದೆ ಜುಮ್ಮೆಂದಿತ್ತು ಆದರೂ ಧೈರ್ಯ ತಾಳಿ "ಸರಸೋತಿ ನೀನು ಅವರ ಮೇಲೆ ಸಿಟ್ಟುಗೊಂಡ ಹಾಗೆ ಕಾಣುತ್ತದೆ ಯಾಕೆ ಸಿಟ್ಟಾಗುತ್ತೀ! ಹೆಣ್ಣಾದವಳಿಗೆ ಯಾವ ಮನೆಯಲ್ಲಿ ಏನು ಸಿಕ್ಕೀತು? ನೀನು ಆ ಮನೆಗೆ ಹೋದರೆ ಏನು ಸುಖ? ಅವರು ಬಂದ ಮೇಲೆ ಹೋಗು" (ಪು:52) ಎಂದು ಸಮಧಾನ ಮಾಡುತ್ತಾಳೆ. ಆದರೂ ಸರಸೋತಿ ಹೋಗುತ್ತಾಳೆ. ತನ್ನ ಗಂಡನ ಎರಡನೇ ವಿವಾಹದ ವಿಷಯ ತಿಳಿದು ಪಾರೋತಿಗೆ ಭವಿಷ್ಯದ ಬಗ್ಗೆ ಆತಂಕ ಮೂಡುತ್ತದೆ. ತನ್ನ ಸಹನೆ–ಅಭಿಮಾನಗಳಿಗೂ ಪೆಟ್ಟುಬೀಳುತ್ತದೆ. ಹೀಗಾದರೂ ಅವಳು ಗಂಡನನ್ನು ವಿರೋಧಿಸಲಾರಳು ವಿಧಿಯಿಲ್ಲದೆ ಗಂಡನ ಎರಡನೇ ಹೆಂಡತಿ ಸತ್ಯಭಾಮೆಯಿಂದ ಅನೇಕ ರೀತಿಯ ಸಂಕಟ ಅವಮಾನಗಳನ್ನು ಸಹಿಸಿಕೊಂಡು ಅವಳ ಮಗ ಲಚ್ಚನನ್ನು ಸ್ವಂತ ಮಗನಿಗಿಂತಲೂ ಅಧಿಕ ಪ್ರೀತಿಯಿಂದ ನೋಡಿಕೊಳ್ಳುತ್ತಾಳೆ. ಅವಳ ಜೀವನದ ಕೊನೆಯ ಆಸೆಯೆಂದರೆ ಗಂಡನ ತೊಡೆಯ ಮೇಲೆ ತಲೆಯಿಟ್ಟು ಮುತ್ತೈದೆಯ ಸಾವನ್ನು ಅನುಭವಿಸುವುದಾಗಿದೆ. ಕಾದಂಬರಿಯಲ್ಲಿ ಈ ಆಸೆ ಈಡೇರುತ್ತದೆ. (ಪು:192)

ಹೇಗಾದರೂ ಮಾಡಿ ಕಾಶಿಯಾತ್ರೆಯನ್ನು ಕೈಗೊಂಡು ಪಾವನಳಾಗಿ ಜೀವಬಿಡಬೇಕೆಂದು ಏಕೈಕ ಆಸೆಯನ್ನಿಟ್ಟುಕೊಂಡು ಕೊನೆಯವರೆಗೂ ಅನ್ಯರ ಹಿತಕ್ಕಾಗಿಯೇ ಬಾಳನ್ನು ತೇಯ್ದ ಸರಸೋತಿಯು ತಮ್ಮನ ಮೊಮ್ಮಗ ರಾಮನ ಕೈಯಿಂದ ಗಂಗಾಜಲವನ್ನು ಕುಡಿದು ಇಚ್ಛಾಮರಣಿಯಂತೆ ಸಾವನ್ನಪ್ಪುತ್ತಾಳೆ. ಸತ್ಯಭಾಮೆಯು ಕೂಡ ತನ್ನ ಗಂಡನಿಂದ ಪಾರೋತಿಗಿಂತ ಸ್ವಲ್ಪ ಹೆಚ್ಚು ಪ್ರೀತಿ ಅನುಭವಿಸಿದ್ದನ್ನು ಬಿಟ್ಟರೆ ಮಗ ಲಚ್ಚನಿಂದಾಗಿ ಕೊನೆಯವರೆಗೂ ಸಂಕಷ್ಟದಲ್ಲಿ ಬಾಳನ್ನು ಸವೆಯುತ್ತಾಳೆ. ಹೀಗೆ ಕಾದಂಬರಿಯಲ್ಲಿ ಸ್ತ್ರೀಯರ ಬದುಕಿನ ಚಿತ್ರಣವನ್ನು ಗಮನಿಸಿದರೆ ಸಾಂಪ್ರದಾಯಿಕ ಬ್ರಾಹ್ಮಣ ಕುಟುಂಬದಲ್ಲಿ ಹೆಣ್ಣಿಗೆ ಇದ್ದ ಸ್ಥಾನಮಾನದ ಅರಿವಾಗುತ್ತದೆ. ಆದರೂ ಕಾದಂಬರಿಯಲ್ಲಿ ಬರುವ ಸ್ತ್ರೀಯರು ಗಂಡಸರಿಗಿಂತಲೂ ದಿಟ್ಟತನದಿಂದ ಬದುಕನ್ನು ಎದುರಿಸಿ ಸಹಜವಾಗಿ ಬದುಕಿ ತಮ್ಮ ಧೀಶಕ್ತಿಯನ್ನು ಧಾರೆಯೆರೆಯುತ್ತಾರೆ.

ಮನೆಯ ಒಡೆಯರಾಗಿದ್ದರೂ ರಾಮೈತಾಳರು ಬದುಕನ್ನು ಮಾನವೀಯವಾಗಿ ಪ್ರೀತಿಸದೆ ಸ್ವಾರ್ಥ, ಆರ್ಥಿಕ ಲಾಭ–ನಷ್ಟಗಳ ದೃಷ್ಟಿಯಿಂದಲೇ ಎದುರಿಸಿ ಕೊನೆಕೊನೆಗೆ ತನ್ನ ಮಗ ಲಚ್ಚನ ಅವಾಂತರಕಾರಿ ವರ್ತನೆಗಳಿಂದ ಬೇಗುದಿಗೆ ಒಳಗಾಗಿ ಒದ್ದಾಡುವಂತಾಗುತ್ತದೆ. ಪಿಂಡ ಹಾಕುವ ಮಗನನ್ನು ಪಡೆಯುವ ಬಯಕೆಯಿಂದ ಎರಡನೇ ಮದುವೆಯಾಗುತ್ತಾರೆ. ಮಗನಿಗೆ ತುಂಬಾ ಆಸ್ತಿ ಮತ್ತು ಹಣದ ವ್ಯಾಮೋಹಕ್ಕಾಗಿ ಇಂಗ್ಲೀಷ್ ಶಿಕ್ಷಣ ಕೊಡಿಸಿ ಅದು ವಿಫಲವಾದಾಗ ಆಘಾತ ಅನುಭವಿಸಿ ಲಚ್ಚನೊಂದಿಗೆ ಸಂಘರ್ಷಿಸುತ್ತಾರೆ. ಲಚ್ಚ ಅಪ್ಪನ ಆಶಯಗಳಿಗೆ ಪೂರ್ತಿ ವಿರುದ್ಧವಾಗಿ ಸಾಗಿ ಇಡೀ ಕುಟುಂಬವನ್ನು ತಲ್ಲಣಕ್ಕೆ ತಳ್ಳುತ್ತಾನೆ ಆಧುನಿಕತೆ ಬದುಕನ್ನು ಸುಧಾರಿಸಬಹುದೆಂದು ನಿರೀಕ್ಷಿಸಿದ್ದ ಐತಾಳರು ಅದು ಇರುವ ಸ್ಥಿತಿಯನ್ನು ಛಿದ್ರಗೊಳಿಸುವುದನ್ನು ನೋಡಿ ನಿರಾಶರಾಗುತ್ತಾರೆ. ಆಧುನಿಕತೆಯ ಕೆಟ್ಟ ಪ್ರತಿನಿಧಿಯಾದ ಲಚ್ಚ ತಂದೆಯಿಂದ ಕುಟುಂಬದಿಂದ ನಿರಂತರವಾಗಿ ದೂರವಾಗುತ್ತಲೇ ಹೋಗುತ್ತಾನೆ. ಉತ್ತಮವಾದುದರ ಬಗ್ಗೆ ತಾವು ಬೆಳೆದು ಬಂದಿದ್ದ ವೈದಿಕ ಪರಂಪರೆಯ ಬಗ್ಗೆ ಶ್ರದ್ಧೆ, ಗೌರವ, ನಂಬಿಕೆಗಳನ್ನು ಸ್ವಲ್ಪ ಮಟ್ಟಿಗಾದರೂ ಉಳಿಸಿಕೊಂಡಿದ್ದ ಐತಾಳರು ಕೊನೆಯ ಕಾಲದಲ್ಲಿಯೂ ತಮ್ಮಲ್ಲಿದ್ದ ಹಣದಿಂದ ಜಮೀನುಕೊಳ್ಳುವ, ಮನೆಯನ್ನು ಆಧುನಿಕಗೊಳಿಸುವ ಕ್ರಿಯೆಯಲ್ಲಿ ತೊಡಗಿ ಬದುಕನ್ನು ಸಹನೆಯಿಂದ ಸ್ವೀಕರಿಸುವಂತೆ ಮಾಡುತ್ತವೆ. ಆದರೆ ಇಂಗ್ಲೀಷ್ ಶಿಕ್ಷಣ ಪಡೆದ ಲಚ್ಚ ಪರಂಪರೆಯ ಮೌಲ್ಯಗಳು ಆಧುನಿಕತೆಯ ಒಳಿತಿಗಾಗಲೀ ಸಕಾರಾತ್ಮಕವಾಗಿ ಸ್ಪಂದಿಸುವ ಗುಣವನ್ನೇ ಕಳೆದುಕೊಂಡು ಅಂತರ್ ಪಿಶಾಚಿಯಂತಾಗುತ್ತಾನೆ. ಕೇವಲ ವೈಯಕ್ತಿಕ ಸುಖಕ್ಕಾಗಿಯೇ ಮೇಲಿಂದ ಮೇಲೆ ತನ್ನ ಕುಟುಂಬಕ್ಕೆ ದ್ರೋಹವೆಸಗುತ್ತಾನೆ. ಹೆಂಡತಿ ನಾಗವೇಣಿಯನ್ನು ವಿನಾಕಾರಣ ಮಾನಸಿಕವಾಗಿ ಹಿಂಸಿಸುತ್ತಾನೆ. ಕೆಟ್ಟ ದಾಂಪತ್ಯಕ್ಕೆ ಸಂಕೇತವಾಗುತ್ತಾನೆ. ಹೆಂಡತಿ ಅವನನ್ನು ಸರಿದಾರಿಗೆ ತರಲು ಶಕ್ತಿಮೀರಿ ಪ್ರಯತ್ನಿಸಿದರೂ ನೈತಿಕವಾಗಿ ಜಾರುವುದನ್ನು ಪುನರಾವರ್ತಿಸುತ್ತಾನೆ. ಆ ಮೂಲಕ ಬದುಕಿಗೆ ವಿಮುಖನಾಗುತ್ತಾ ಸಾಗುತ್ತಾನೆ. ಇವನನ್ನು ಕಾದಂಬರಿಯಲ್ಲಿ ಎರಡನೇ ತಲೆಮಾರಿನ ಪ್ರತಿನಿಧಿಯನ್ನಾಗಿ ಚಿತ್ರಿಸಲಾಗಿದೆ. ಇವನು ತನ್ನ ನೀಚ ಕೃತ್ಯಗಳಿಂದಾಗಿ ಕುಟುಂಬವನ್ನು ಗೊಂದಲದಲ್ಲಿ ಸಂಕಷ್ಟದಲ್ಲಿ ಸಿಕ್ಕಿಸುತ್ತಾನೆ. ಭಾರತೀಯ ಸಾಂಪ್ರದಾಯಿಕ ಸಮಾಜ ಮೊದಲು ಆಧುನಿಕತೆಗೆ ತೆರೆದುಕೊಂಡಾಗ ಈ ರೀತಿಯ ಗೊಂದಲಗಳನ್ನು ಅನುಭವಿಸಬೇಕಾದದು ಸಹಜವಾಗಿತ್ತು. ಆಧುನಿಕತೆಯ ಕೆಡುಕಿಗೆ ಮಾರುಹೋದರೆ ಸ್ವೀಕರಣಕ್ಕೆ ಮುಂದಾದರೆ ಲಚ್ಚನಂತ ವ್ಯಕ್ತಿತ್ವ ಪ್ರಾಪ್ತವಾಗುತ್ತದೆ ಎಂಬ ಸ್ಪಷ್ಟ ಸೂಚನೆಯನ್ನು ಕಾರಂತರು ಕೊಡುತ್ತಿದ್ದಾರೆಯೇ ಹೊರತು ಆಧುನಿಕ ಶಿಕ್ಷಣವನ್ನಾಗಲೀ ಆಧುನಿಕತೆಯ ಒಳ್ಳೆಯ ಅಂಶಗಳನ್ನಾಗಲೀ ತಿರಸ್ಕರಿಸುತ್ತಿಲ್ಲ ಎಂಬುದನ್ನು ನಾವು ಗ್ರಹಿಸಬೇಕಾಗುತ್ತದೆ.

ಪರಂಪರೆಯ ಒಳ್ಳೆಯ ಅಂಶಗಳು ಮತ್ತು ಆಧುನಿಕತೆಯ ಒಳಿತಿನ ಸಮ್ಮಿಲನದ ಮೂಲಕ ಒಂದು ಒಳ್ಳೆಯ ಕುಟುಂಬ ವ್ಯವಸ್ಥೆ ಸಾಕಾರಗೊಂಡು ಮಾನವೀಯ ಸಂಬಂಧಗಳಿಂದ ತನ್ನ ಪರಿಸರಕ್ಕೆ ಸ್ಪಂದಿಸುವ ರಾಮನಂತ ವ್ಯಕ್ತಿತ್ವ ರೂಪಿತವಾಗುವುದಕ್ಕೆ ಸಾಧ್ಯ ಎಂಬ ಆಶಯ ವಾಸ್ತವವಾಗುವುದನ್ನು ಕಾರಂತರು ರಾಮನ ಪಾತ್ರದ ಮೂಲಕ ಸೂಚಿಸುತ್ತಾರೆ. ರಾಮನು ಆದರ್ಶಯುತವಾದ ಸಹಜ ಬದುಕನ್ನು ಕಟ್ಟಿಕೊಳ್ಳುತ್ತಾನೆ. ಪರಂಪರೆ ಮತ್ತು ಆಧುನಿಕತೆಯ ನಡುವಿನ ಸೇತುವೆಯಾಗಿ ತಾಯಿ ನಾಗವೇಣಿ ರಾಮನಿಗೆ ನೆರವಾಗುತ್ತಾಳೆ.

ಲಚ್ಚನ ಬೇಜವಾಬ್ದಾರಿ, ಸ್ವಾರ್ಥ, ನೀಚತನ ಹಾಗೂ ದುಶ್ಚಟಗಳ ನೇರ ಪರಿಣಾಮಗಳನ್ನು ಎದುರಿಸುವವಳು ನಾಗವೇಣಿ. ಇಡೀ ಕಾದಂಬರಿಯಲ್ಲಿ ನಾಗವೇಣಿಯದು ಅತ್ಯಂತ ಸಂಕೀರ್ಣವಾದ ಪಾತ್ರವಾಗಿದೆ. ಹಳೆಯ ತಲೆಮಾರಿನ ಸರಸೋತಿ, ಪಾರೋತಿಯರು ನಂಬಿ ಬದುಕಿದ್ದ ಸಾಂಪ್ರದಾಯಿಕ ಪುರುಷ ಪ್ರಧಾನ ಮೌಲ್ಯಗಳನ್ನು ಪ್ರತಿನಿಧಿಸಿದರೂ, ಅವಳ ಮಗ ರಾಮ ಪ್ರತಿನಿಧಿಸುವ ಆಧುನಿಕ ಜೀವನ ಮೌಲ್ಯಗಳು ರೂಪುಗೊಳ್ಳುವುದಕ್ಕೂ ಕಾರಣವಾಗುವುದರಿಂದ ಈ ಸಂಕೀರ್ಣತೆ ಪ್ರಾಪ್ತವಾಗುತ್ತದೆ. ಇದನ್ನು ಜಿ. ಎಸ್. ಆಮೂರರ ಮಾತುಗಳು ಪುಷ್ಟೀಕರಿಸುತ್ತವೆ "ಲಚ್ಚನಿಂದಾಗಿ ನಾಗವೇಣಿಯ ಜೀವನಾನುಭವ ದುಃಖಮಯವಾಗುತ್ತದೆ. ಆದರೆ ಸರಸೋತಿ, ಪಾರೋತಿಯರಿಗೆ ಸಾಧ್ಯವಾಗದ ಆಯ್ಕೆಗಳು ಸಾಧ್ಯವಾಗುತ್ತವೆ. ಉದಾಹರಣೆಗೆ ಅವಳು ತಂದೆ ಮನೆಯಲ್ಲಿ ಸ್ವಸ್ಥ ಜೀವನ ನಡೆಸಬಹುದಿತ್ತು. ಆದರೆ ತನ್ನ ಗಂಡನ ಮನೆಯ ಕಷ್ಟದ ಜೀವನವನ್ನು ಆರಿಸಿಕೊಳ್ಳುತ್ತಾಳೆ. ಅವಳ ಧೈರ್ಯ ಶ್ರದ್ಧೆಗಳಿಂದ ಈ ಆಯ್ಕೆಗಳು ಅರ್ಥಪೂರ್ಣವಾಗುತ್ತವೆ. ಅವಳ ವ್ಯಕ್ತಿತ್ವ ಸಾಧನೆ ಉಳಿದವರಿಗೆ ಸ್ಫೂರ್ತಿದಾಯಕವಾಗುತ್ತದೆ. ಈ ಕಾದಂಬರಿಯಲ್ಲಿ ಲಚ್ಚ ಸಂಪೂರ್ಣವಾಗಿ ಪ್ರಕೃತಿಗೆ ಅಂಟಿಕೊಂಡರೆ, ನಾಗವೇಣಿ ಪ್ರಕೃತಿಯ ಒತ್ತಡಗಳನ್ನು ಅಲ್ಲಗಳೆಯದೆಯೇ ಸಂಸ್ಕೃತಿಯನ್ನು ಸಾಧಿಸುತ್ತಾಳೆ." (ಕನ್ನಡ ಕಥನ ಸಾಹಿತ್ಯ ಕಾದಂಬರಿ: 1996, ಪು:135)

ವಿಮರ್ಶಕ ಟಿ. ಪಿ. ಅಶೋಕ ಇವರು ಲಚ್ಚ-ನಾಗವೇಣಿಯರ ಕುಟುಂಬ ಜೀವನದ ಬಗ್ಗೆ ಹೇಳುವ ಮಾತುಗಳು ಸರಿಯಾಗಿಯೇ ಇವೆ. "ನಾಗವೇಣಿ-ಲಚ್ಚರ ದಾಂಪತ್ಯ ಒಂದು ದಾಂಪತ್ಯ ಹೇಗಿರಬಾರದೆಂಬುದಕ್ಕೆ ಉತ್ತಮ ಉದಾಹರಣೆಯಾಗಿದೆ. ಒಂದೆರಡು ಬಾರಿ ಬದಲಾವಣೆಯ ಸೂಚನೆಗಳು ಕಂಡುಬಂದರೂ ಅವು ಮರೀಚಿಕೆಗಳಂತೆ ಕೇವಲ ಭ್ರಮೆಹುಟ್ಟಿಸಿ ಆ ಮೂಲಕ ಇನ್ನಷ್ಟು ದುಃಖ ನಿರಾಸೆಗಳಿಗೆ ಕಾರಣವಾಗುತ್ತದೆ. ಹಾಗಾಗಿ ನಾಗವೇಣಿಯ ಬದುಕು ಸರಸೋತಿ, ಪಾರೋತಿಯರ ಬದುಕಿಗಿಂತ ಹೆಚ್ಚಿನ ಸಮಸ್ಯೆ ಸವಾಲುಗಳನ್ನು ಎದುರಿಸಬೇಕಾಗುತ್ತದೆ. ಸರಸೋತಿ ಹೇಳುವಂತೆ ಯಾವ ಮುಹೂರ್ತದಲ್ಲಿ ಲಚ್ಚನ ಕೈಹಿಡಿದಳೋ ಒಂದೇ ಒಂದು ದಿನ ಸುಖಪಡಲಿಲ್ಲ. ನಮ್ಮಂತವರಿಗೆ ಗಂಡನಿಲ್ಲದ ವೈಧವ್ಯವಾದರೆ ಅವಳಿಗೆ ಇದ್ದೂ ವೈಧವ್ಯ ಆಯಿತು." (ಶಿವರಾಮ ಕಾರಂತರ ಎರಡು ಅಧ್ಯಯನಗಳು, 1966, ಪು:53) ಹೀಗೆ ಲಚ್ಚನ ದುಷ್ಟ ವ್ಯಕ್ತಿತ್ವದಿಂದ ಅವರ ದಾಂಪತ್ಯ ಜೀವನ ವಿಫಲವಾಗುತ್ತದೆ ಎಂಬ ಸೂಚನೆಯನ್ನು ಕಾರಂತರು ನೀಡುತ್ತಾರೆ.

ಅಜ್ಜ ಮತ್ತು ತಂದೆಯರಿಗಿಂತ ಭಿನ್ನವಾಗಿ ಆಲೋಚಿಸಿ ಅರ್ಥಪೂರ್ಣವಾದ ಬದುಕನ್ನು ಕಟ್ಟಿಕೊಳ್ಳುವಲ್ಲಿ ರಾಮ ಯಶಸ್ವಿಯಾಗುತ್ತಾನೆ. ಇವನು ಮುಖಾಮುಖಿಯಾಗುವ ಜೀವನದ ಅನುಭವಗಳಿಂದ ತನ್ನ ಬದುಕಿನ ನೆಲೆಯನ್ನು ರೂಪಿಸಿಕೊಳ್ಳುತ್ತಾನೆ. ತನ್ನ ಸ್ವಂತ ಕಷ್ಟ-ಸುಖಗಳ ಜತೆಯಲ್ಲಿ ಕುಟುಂಬದ ಹಿತಾಹಿತಗಳಲ್ಲೂ ಭಾಗಿಯಾಗುತ್ತಾನೆ. ತನ್ನ ಕುಟುಂಬ, ಬಂಧುಗಳು, ಸ್ನೇಹಿತರು, ಪರಿಚಿತರೊಡನೆ ಅರ್ಥಪೂರ್ಣವಾದ ನಂಬಿಕೆಯ ಸಂಬಂಧ ಇಟ್ಟುಕೊಳ್ಳುವುದು, ಬದುಕಿನಲ್ಲಿ ಎದುರಾಗುವ ಕಡುಕಷ್ಟಗಳನ್ನು ಆತ್ಮಸ್ಥೈರ್ಯದಿಂದ ಗೆಲ್ಲಲು ಸಾಧ್ಯವಾಗುತ್ತದೆ. ತನ್ನನ್ನೇ ಜೀವದ ಹಾಗೆ ನಂಬಿ ಬದುಕುವ ತಾಯಿಯ ಬದುಕಿನ ಸಂತೋಷಕ್ಕಾಗಿ, ಸ್ಥಿರತೆಗಾಗಿ ಉದ್ಯೋಗ ಅರಸುತ್ತ ಅನೇಕ ನಗರಗಳನ್ನು ಸುತ್ತುತ್ತಾನೆ. ಕೆಲಸ ಸಿಗದಿದ್ದಾಗ ನಿರಾಶನಾಗದೆ ಆ ತಿಳುವಳಿಕೆಯನ್ನು ಜೀವನಮುಖಿಯಾಗಿ ಪರಿವರ್ತಿಸಿಕೊಳ್ಳುವಷ್ಟು ಪ್ರಬುದ್ಧತೆಯನ್ನು ಗಳಿಸುತ್ತಾನೆ. ಪರಿಸರ ಮತ್ತು ಸಂಗೀತವನ್ನು ಬದುಕಿನ ಸೃಜನಶೀಲ ಆಕರವಾಗಿ ಬಳಸಿಕೊಳ್ಳುತ್ತಾನೆ. ತನ್ನ ತಾಯಿಯ ತಾಳ್ಮೆ, ವಿವೇಕ, ಪ್ರಕೃತಿಗೆ ಹೊಂದಿಕೊಳ್ಳುವ ಗುಣ, ಸ್ವಾಭಿಮಾನ ಇವು ರಾಮನ ವ್ಯಕ್ತಿತ್ವ ನಿರ್ಮಾಣದಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ರಾಮನ ಬದುಕು, ವಿದ್ಯಾಭ್ಯಾಸ ಮತ್ತು ಉದ್ಯೋಗದ ಕಾರಣಕ್ಕಾಗಿ ಸ್ಥಿತ್ಯಂತರಗಳನ್ನು ಹೊಂದಿ ಅಂತಿಮವಾಗಿ ತನ್ನ ಊರಿಗೆ ಮರಳಿ ಬಂದು ಕೃಷಿಯಲ್ಲಿ ತೊಡಗಿ ಗಟ್ಟಿಯಾಗಿ ನೆಲೆಗೊಳ್ಳುತ್ತಾನೆ. ಅಜ್ಜನ ಪೌರೋಹಿತ್ಯವನ್ನು ಮುಂದುವರಿಸದೆ ಶಿಕ್ಷಕ ವೃತ್ತಿಯನ್ನು ಆಯ್ಕೆ ಮಾಡಿಕೊಳ್ಳುತ್ತಾನೆ. ತಂದೆ ಕಳೆದಿದ್ದ ಜಮೀನನ್ನೆಲ್ಲ ಮತ್ತೆ ಗಳಿಸುತ್ತಾನೆ. ತನ್ನ ದೊಡ್ಡಜ್ಜಿ ಹೆಸರಿನ ಹುಡುಗಿಯನ್ನು (ಸರಸ್ವತಿ) ಮದುವೆಯಾಗಿ ಕೋಡಿಯಲ್ಲಿ ನೆಲೆಯೂರಿ ತನ್ನ ಅಜ್ಜನಿಗಿಂತ ಮಾನವೀಯವಾಗಿ ಕುಟುಂಬಕ್ಕೆ ಸ್ಥಿರತೆಯನ್ನು ತಂದು ಕೊಡುತ್ತಾನೆ ಎಂಬ ಆಶಯದೊಂದಿಗೆ ಕಾದಂಬರಿ ಕೊನೆಯಾಗುತ್ತದೆ.

ಹೀಗೆ ಕಾರಂತರು ಮೂರು ತಲೆಮಾರುಗಳಲ್ಲಿ ರಾಮೈತಾಳರ ಕುಟುಂಬದಲ್ಲಿ ಜರಗುವ ಸ್ಥಿತ್ಯಂತರಗಳನ್ನು ಕಲಾತ್ಮಕವಾಗಿ ವಾಸ್ತವವಾದಿ ಧೋರಣೆಯೊಂದಿಗೆ ದೇಶಿಯ ನೆಲೆಯಲ್ಲಿ ಶೋಧಿಸುತ್ತಾರೆ.

**ಆಕರ ಗ್ರಂಥ:**


1. ಕಾರಂತ ಶಿವರಾಮ: 1996: ಮರಳಿ ಮಣ್ಣಿಗೆ: ಎಸ್‌ಬಿಎಸ್ ಪಬ್ಲಿಷರ್ಸ್ ಡಿಸ್ಟ್ರಿಬ್ಯೂಟರ್ಸ್, ರೈಲ್ವೆ ಪಾರಲೆಲ್ ರೋಡ್, ಬೆಂಗಳೂರರಯ–560001


**ಪರಾಮರ್ಶನ ಕೃತಿಗಳು**


1. ಅಮೂರ ಜಿ. ಎಸ್., 1983, ಕನ್ನಡ ಕಾದಂಬರಿಯ ಬೆಳವಣಿಗೆ, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು.
2. ಅಮೂರ ಜಿ. ಎಸ್., 1986, ಸಮಕಾಲೀನ ಕಥೆ–ಕಾದಂಬರಿ ಹೊಸ ಪ್ರಯೋಗಗಳು, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು–18.
3. ಅಶೋಕ ಟಿ. ಪಿ., 1990, ಶಿವರಾಮ ಕಾರಂತ ಎರಡು ಅಧ್ಯಯನಗಳೂ, ಅಕ್ಷರ ಪ್ರಕಾಶನ, ಹೆಗ್ಗೋಡು(ಸಾಗರ), ಕರ್ನಾಟಕ.
4. ಕೇಶವ ಶರ್ಮ ಕೆ., 1988, ಶಬ್ದರೇಖೆ, ಅಭಿನವ ಪ್ರಕಾಶನ, ಬೆಂಗಳೂರು–560010.
5. ಕೋದಂಡ ರಾಮ ಎನ್. ಕೆ., 1996, ಕನ್ನಡ ಕಥಾ ಸಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷ, ಗಾಯತ್ರಿ ಸ್ಮಾರಕ ಗ್ರಂಥ ಮಾಲೆ, ಬೋಗಾದಿ, ಮೈಸೂರು.